# ಬಾಡಿಗೆ ತಾಯಿ ನಿಯಂತ್ರಣ ವಿಧೇಯಕಕ್ಕೆ ಸಂಪುಟ ಅಸ್ತು

ನವದೆಹಲಿ: ಹಣಕ್ಕಾಗಿ ಬಾಡಿಗೆ ತಾಯಂದಿರಾಗುವುದನ್ನು ನಿಯಂತ್ರಿಸುವ ವಿಧೇಯಕಕ್ಕೆ ಸಂಪುಟದ ಅನುಮೋದನೆ ದೊರೆತಿದ್ದು, ಶೀಘ್ರವೇ ಲೋಕಸಭೆಯಲ್ಲಿ ಮಂಡನೆಯಾಗಲಿದೆ.

ಈ ವಿಧೇಯಕವನ್ನು ಕಳೆದ ವರ್ಷವೇ ಲೋಕಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದುಕೊಳ್ಳಲಾಗಿತ್ತು. ಆದರೆ ರಾಜ್ಯಸಭೆಯಲ್ಲಿ ಇದಕ್ಕೆ ಒಪ್ಪಿಗೆ ದೊರೆತಿರಲಿಲ್ಲ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಇದನ್ನು ಸದನದಲ್ಲಿ ಮಂಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಸಂಪುಟ ಅನುಮೋದನೆ ನೀಡಿದೆ.

ಈ ವಿಧೇಯಕದಲ್ಲಿರುವ ಹಣಕ್ಕಾಗಿ ಬಾಡಿಗೆ ತಾಯಂದಿರಾಗುವುದು, ಮಾನವ ಭ್ರೂಣ ಮಾರಾಟವನ್ನು ನಿಷೇಧಿಸುವುದು ಮತ್ತು ಕೆಲವು ಷರತ್ತುಗಳ ಆಧಾರದ ಮೇಲೆ ನೈತಿಕ ಸರೋಗೆಸಿಗೆ ಅವಕಾಶ ನೀಡುವ ಪ್ರಸ್ತಾವನೆಗಳ ಹೊಂದಿದೆ. ಸ್ನೇಹಿತರು ಮತ್ತು ಸಂಬಂಧಿಕರು ಬಾಡಿಗೆ ತಾಯಂದಿರಾಗಲು ಮುಂದೆ ಬಂದಲ್ಲಿ ಅದಕ್ಕೆ ಅವಕಾಶ ನೀಡಲು ಪ್ರಸ್ತಾಪಿಸಲಾಗಿದೆ.